ಧಾರ್ಮಿಕ ದತ್ತಿ ಇಲಾಖೆಯ ವತಿಯಿಂದ ರಾಜ್ಯದಲ್ಲಿ ನಡೆಸುತ್ತಿರುವ ದೇವಸ್ಥಾನಗಳು

1039 (46): ಕೆ. ಹರ್ಷಕುಮಾರಗೌಡ (ಚಾಮರಾಜ):-

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ಒಟ್ಟು ದೇವಸ್ಥಾನಗಳೆಷ್ಟು;

ಆ. ಈ ದೇವಸ್ಥಾನಗಳಲ್ಲಿ ಹೆಚ್ಚಿನ ಆದಾಯ ಬರುವ ದೇವಸ್ಥಾನಗಳಾವುವು;

ಇ. ಈ ದೇವಸ್ಥಾನಗಳಿಗಾಗುವ ವರ್ಷದ ಖರ್ಚೆಷ್ಟು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):-

ಅ. ಒಟ್ಟು 37,778 ದೇವಾಲಯಗಳು ಇವೆ.

ಆ. ಹೆಚ್ಚಿನ ಆದಾಯ ಬರುವ ದೇವಸ್ಥಾನಗಳ ಪಟ್ಟಿಯನ್ನು ಅನುಬಂಧ 'ಅ'ನಲ್ಲಿ ತೋರಿಸಿದೆ.

ಇ. ಖರ್ಚಿನ ವಿವರ ಅನುಬಂಧ 'ಅ' ನಲ್ಲಿದೆ.

ವಾರ್ಷಿಕ ರೂ. 20.00 ಲಕ್ಷಕ್ಕಿಂತ ಅಧಿಕ ಆದಾಯ ಇರುವ ದೇವಾಲಯಗಳ ತಖ್ತೆ:

ಕ್ರ. ಸಂ.	ದೇವಾಲಯದ ಹೆಸರು	ಆದಾಯ	ವೆಚ್ಚ
1.	ಶ್ರೀ ಬನಶಂಕರಿ ದೇವಾಲಯ, ಬೆಂಗಳೂರು (ನಗರ) ಜಿಲ್ಲೆ	ರೂ. 20,30,823.00	7,55,904.00
2.	ಶ್ರೀ ಮಲೈ ಮಹದೇಶ್ವರಸ್ವಾಮಿ ಮಹದೇಶ್ವರ ಬೆಟ್ಟ, ಕೊಳ್ಳೇಗಾಲ ತಾಲ್ಲೂಕು, ಮೈಸೂರು ಜಿಲ್ಲೆ	1,34,73,369.00	1,03,13,865.00
3.	ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು, ಮೈಸೂರು ಜಿಲ್ಲೆ.	58,85,503.00	30,67,653.00
4.	ಶ್ರೀ ಚಾಮುಂಡೇಶ್ವರಿ ದೇವಾಲಯ ಚಾಮುಂಡಿಬೆಟ್ಟ, ಮೈಸೂರು ಜಿಲ್ಲೆ	51,57,812.00	26,43,275.00
5.	ಶ್ರೀ ಸಿದ್ದಲಿಂಗೇಶ್ವರಸ್ವಾಮಿ ದೇವಸ್ಥಾನ, ಎಡೆಯೂರು, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ	41,87,640.00	35,80,190.00
6.	ಶ್ರೀ ಕುಕ್ಕೆ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ಸುಬ್ರಹ್ಮಣ್ಯ, ಸುಳ್ಯ ತಾ: ದಕ್ಷಿಣ ಕನ್ನಡ ಜಿಲ್ಲೆ.	1,33,56,562.00	53,68,620.99
7.	ಶ್ರೀ ಮೂಕಾಂಬಿಕಾ ದೇವಾಲಯ ಕೊಲ್ಲೂರು, ಕುಂದಾಪುರ ತಾ:	1,19,80,752.75	61,96,702.38

8.	ಶ್ರೀ ದುರ್ಗಾಪರಮೇಶ್ವರಿ ದೇವಾಲಯು ಕಟೀಲು, ಮಂಗಳೂರು ತಾಲ್ಲೂಕು	1,23,70,894.50	1,15,12,334.40
9.	ಶ್ರೀ ಆನೆಗುಡ್ಡೆ ವಿನಾಯಕ ದೇವರು ಕುಂದಾಪುರ ತಾಲ್ಲೂಕು	35,34,300.69	32,30,823.20
10.	ಶ್ರೀ ಮಂದಾರ್ತಿ ದುರ್ಗಾಪರಮೇಶ್ವರಿ ದೇವಾಲಯ, ಹೆಗ್ಗುಂಜೆ, ಉಡುಪಿ ತಾ:	20,18,030.00	18,85,950.00
11.	ಶ್ರೀ ಕದ್ರಿ ಮಂಜುನಾಥ ದೇವಾಲಯು ಮಂಗಳೂರು ತಾಲ್ಲೂಕು	35,33,680.40	29,43,077.90
12.	ಶ್ರೀ ಮಹಾಲಿಂಗೇಶ್ವರ ದೇವಾಲಯು, ಪುತ್ತೂರು ತಾಲ್ಲೂಕು	40,96,893.00	37,45,000.00
13.	ಶ್ರೀ ಜನಾರ್ದನ ಮತ್ತು ಮಹಾಕಾಳಿ ದೇವಾಲಯು, ಅಂಬಲಪಾಡಿ, ಉಡುಪಿ ತಾಲ್ಲೂಕು	34,12,481.63	27,42,831.93

1984ನೇ ಸಾಲಿನಿಂದ ಬೀದರ್ ಜಿಲ್ಲೆಯಲ್ಲಿ ಸ್ಥಾಪಿಸಲಾದ ಜೈವಾನಿಲ ಸ್ಥಾವರಗಳ ಸಂಖ್ಯೆ

1040 (1436): ಶ್ರೀ ನಾರಾಯಣರಾವ್ (ಮನವಳ್ಳಿ–ಬೀದರ್):–

ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1984ನೇ ಸಾಲಿನಿಂದ ಬೀದರ್ ಜಿಲ್ಲೆಯಲ್ಲಿ ಸ್ಥಾಪಿಸಲಾದ ಜೈವಾನಿಲ ಸ್ಥಾವರಗಳ ಸಂಖ್ಯೆ;

ಆ. ಅವುಗಳಲ್ಲಿ ಎಷ್ಟು ಕಾರ್ಯ ನಿರ್ವಹಿಸುತ್ತಿವೆ;

ಇ. ಸರ್ಕಾರವು ಈ ಬಗ್ಗೆ ಅತ್ಯಾವಶ್ಯಕವೆಂದು ಭಾವಿಸಿದಲ್ಲಿ, ಸರ್ಕಾರದ ಮುಂದಿನ ನೀತಿ ಏನು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ಅ. 1984-85ನೇ ಸಾಲಿನಿಂದ ಜನವರಿ 93ರ ಅಂತ್ಯದವರೆಗೆ 529 ಜೈವಾನಿಲ ಘಟಕಗಳನ್ನು ಸ್ಥಾಪಿಸಲಾಗಿದೆ.

ಆ. ಅವುಗಳಲ್ಲಿ 264 ಸ್ಥಾವರಗಳು ಕಾರ್ಯ ನಿರ್ವಹಿಸುತ್ತಿವೆ.

ಇ. ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯು ರಾಷ್ಟ್ರೀಯ ಕಾರ್ಯಕ್ರಮವಾಗಿದೆ. ಈ ಯೋಜನೆಯು ಗ್ರಾಮೀಣ ಪ್ರದೇಶದ ಬಹುತೇಕ ಸಂಖ್ಯೆಯ ಕುಟುಂಬಗಳಿಗೆ ಅಡಿಗೆಗೆ ಬೇಕಾದ ಉರುವಲನ್ನು ಒದಗಿಸುವಲ್ಲಿ ಉಪಯುಕ್ತವಾಗಿದೆ. ವಿಫಲವಾಗಿರುವ ಸ್ಥಾವರಗಳು ಭಾಗ್ಯಲಕ್ಷ್ಮಿ ಮಾದರಿಗೆ ಸೇರಿದವಾಗಿವೆ. ದಿನಾಂಕ 1.2.1985ರಿಂದ ಈ ಮಾದರಿಯ ಪ್ರಚಾರವನ್ನು ನಿಲ್ಲಿಸಲಾಗಿದೆ. ಆದಾಗ್ಯೂ ಇತರೆ ಮಾದರಿಗಳಾದ, ದೀನ ಬಂಧು ಮತ್ತು ಕೆ.ವಿ.ಐ.ಸಿ. ತೇಲುವ ಮಾದರಿ ಡ್ರಂಗಳು ಸಮರ್ಪಕವಾಗಿ ಸೇವೆಯನ್ನು ನಿರ್ವಹಿಸುತ್ತಿವೆ. ಭಾಗ್ಯಲಕ್ಷ್ಮಿ ಸ್ಥಾವರಗಳ ವಿಫಲತೆಯಿಂದ ನೊಂದ ಫಲಾನುಭವಿಗಳ ಕಷ್ಟವನ್ನು ನೀಗಿಸಲು ರಾಜ್ಯ ಸರ್ಕಾರವು 'ಅನಿಲ ಯೋಜನೆ' ಎಂಬ ಯೋಜನೆಯನ್ನು ರೂಪಿಸಿದ್ದು, ಇದರಡಿಯಲ್ಲಿ ಸ್ಥಗಿತಗೊಂಡ ಭಾಗ್ಯಲಕ್ಷ್ಮಿ ಸ್ಥಾವರಗಳನ್ನು ದುರಸ್ತಿ